## 18

# ಹಾನಿಕಾರಕನಲ್ಲದ ಮನುಷ್ಯ

## (2 ಅರಸು 11:1-13:25)

ನಾವು ತ್ವರೆಯಿಂದ ಎಲೀಷನ ಅಂತಿಮ ವರ್ಷದ ಜೀವಿತದ ಮೂಲಕ ಹಾದು ಹೋಗುವವರಾಗಿದ್ದೇವೆ. 2 ಅರಸು 11ರಲ್ಲಿ ಅಥಲ್ಯಳಿಂದ ಯೂದಾಯದ ಸಿಂಹಾಸನವನ್ನು ಕಿತ್ತುಕೊಳ್ಳುವಿಕೆಯನ್ನು ಯಹೋವಾಷನು ಯುಕ್ತವಾದ ಅರಸನೆಂದೂ ಪಟ್ಟಧಾರಣೆ ಮಾಡಿದ್ದನ್ನೂ ನಾವು ಓದುತ್ತೇವೆ. ಅಧ್ಯಾಯ 12 ಅರಸನಾದ ಯೆಹೋ ವಾಷನು ಯೆರೂಸಲೇಮಿನ ಜೀರ್ಣೋದ್ಧಾರ ಮಾಡಿಸಿದ್ದನ್ನು ಹೇಳುವುದಾಗಿದೆ. 2 ಅರಸು 13ನೇಯ ಅಧ್ಯಾಯವು ತಿರುಗಿ ಎಲೀಷನ ಕಾರ್ಯವನ್ನು ಕೇಂದ್ರಿಕರಿಸಿಕೊಳ್ಳುವ ಇಸ್ರಾಯೇಲಿನ ಉತ್ತರ ರಾಜ್ಯಗಳ ಕಥೆಯನ್ನು ಹಾಕಿಕೊಳ್ಳುವುದಾಗಿದೆ. ಯೇಹುವಿನ ಮರಣದ ನಂತರ, ಆತನ ಮಗನಾದ ಯೆಹೋವಾಜನು ಇಸ್ರಾಯೇಲಿನ ಅರಸನಾದನು (13:1; ನೋಡಿರಿ 10:35). ಹದಿನೇಳು ವರ್ಷಗಳ ಆಳ್ವಿಕೆಯ ನಂತರ ಯೆಹೋವಾಜನು ಮರಣಿಸಿದನು; ನಂತರ ಆತನ ಮಗನಾದ ಯೋವಾಷನು[1] ಅರಸನಾದನು (13:9). ಯೋವಾಷನು ಹದಿನಾರು ವರ್ಷಗಳವರೆಗೆ ಆಳಿದನು ಮತ್ತು “ಯೆಹೋವನ ದೃಷ್ಟಿಯಲ್ಲಿ ದ್ರೋಹಿಯಾದನು” (13:11). ಈ ದಶಕಗಳಲ್ಲಿ, ಅಲ್ಲಿ ಎಲೀಷನ ಬಗೆಗೆ ಯಾವ ಸೂಚನೆಗಳೂ ಇಲ್ಲ, ಹೇಗೋ, “ತೊಂದರೆಗೊಳಗಾದ ಸಮಯಗಳಿಗಾಗಿ ದೇವರ ಮನುಷ್ಯನು” ಎಂಬ ಮಾತು ಇನ್ನೂ ನಿವೃತ್ತಿಯಾಗಿರಲಿಲ್ಲ. ನಾನು ಈ ತೀರ್ಮಾನವನ್ನು ಎರಡು ವಾಸ್ತವಾಂಶಗಳ ಮೇಲೆ ಮೂಲವಾಗಿಡುತ್ತೇನೆ:

- ನಮ್ಮ ಹಿಂದಿನ ಅಧ್ಯಯದಲ್ಲಿ ಪ್ರಕಟವಾದ ಎಲೀಷನ ಪಾತ್ರವು, ಆತನು ಓಡಿ ಹೋಗುವ ಮನುಷ್ಯನಲ್ಲ ಎಂದು ಸೂಚಿಸುವುದಾಗಿದೆ.
- ಎಲೀಷನು ತನ್ನ ಜೀವಿತದ ಅಂತ್ಯದ ಹತ್ತಿರಕ್ಕೆ ಬಂದಾಗ್ಯೂ, ಅರಸನಾದ ಯೋವಾಷನು: “ನನ್ನ ತಂದೆಯೇ, ನನ್ನ ತಂದೆಯೇಇಸ್ರಾಯೇಲ್ಯರಿಗೆ ರಥರಥಾಶ್ವಬಲಗಳಾಗಿದ್ದವನೇ” ಎಂದು ಹೇಳಿದನು (13:14ಬಿ). ಎಲೀಷನು ನಿರಂತರವಾಗಿ ರಾಷ್ಟ್ರದ ಆತ್ಮೀಕ ಸಲಹೆಗಾರನಾಗಿ (“ತಂದೆ”) ಮತ್ತು ದೇವರ ರಕ್ಷಣಾ ನಿಯೋಗಿಯಾಗಿ (ಇಸ್ರಾಯೇಲ್ಯರ ರಥ, ರಥಾಶ್ವ ಬಲ) ಇದ್ದನು ಎಂದು ಈ ಮಾತುಗಳು ಸೂಚಿಸುವವುಗಳಾಗಿವೆ.

ಹೇಗೋ ದೊಡ್ಡ ಜೀವಿಗೂ ಅಂತ್ಯವುಂಟು (ಇಬ್ರಿಯ 9:27ಎ). ಈ ಪಾಠದಲ್ಲಿ, ನಾವು ಪ್ರವಾದಿಯ ಜೀವಿತವು ಅಸ್ತಂಗತನಾಗುವುದಕ್ಕೆ ಸಾಕ್ಷಿಗಳಾಗುತ್ತೇವೆ. ಆದರೆ ಇದೆಂತಹ ಅದ್ಭುತವಾದ ಅಸ್ತಂಗತವಾಗಿದೆ![2] ನಾನು ಈ ಅಂತಿಮ ಪಾಠವನ್ನು ಇದನ್ನು “ಹಾನಿಕಾರಕನಲ್ಲದ ಮನುಷ್ಯ” ಎಂದು ಕರೆಯುತ್ತೇನೆ.

### ಮರಣಿಸುತ್ತಿದ್ದರೂ ಸಹ ದೇವರ ಮನುಷ್ಯನ ಪ್ರವಾದನೆ (13:14-19)

ಕಥೆಯು ಎಲೀಷನು “ಮರಣಕರವಾದ ರೋಗದಲ್ಲಿ ಬಿದ್ದನು” (ವಚನ 14ಎ) ಎಂದು ತೆರೆಯುತ್ತಾ ಹೋಗುತ್ತದೆ. ಆತನು ಎಂಬತ್ತು ಮತ್ತು ತೊಂಬತ್ತರ ವಯಸ್ಸಿನೊಳಗಡೆ ಇದ್ದನು.[3] ಆತನ ರೋಗವು ವೃದ್ಧಾಪ್ಯದ ಸಮಯದಲ್ಲಿ ಪೀಡಿಸುವಂತಹ ಯಾವದೇ ಒಂದು ರೋಗವು

ಆತನಿಗೆ ಹತ್ತಿಕೊಂಡಿರಬಹುದು.

"ಇಸ್ರಾಯೇಲಿನ ಅರಸನಾದ ಯೋವಾಷನು" ತಳಮಳಗೊಂಡನು ಮತ್ತು ಎಲೀಷನನ್ನು "ನೋಡಲು ಬಂದನು" (ವಚನ 14ಬಿ). ಎಲೀಷನು ಎಲ್ಲಿದ್ದಾನೆ ಎಂಬುದು ಆತನಿಗೆ ತಿಳಿದಿರಲಿಲ್ಲ, ಆದರೆ ಆ ಸ್ಥಳವು ಸಮಾರ್ಯದಿಂದ ಸಲ್ಪ ಅಂತರದಲ್ಲಿ ಇರಬಹುದು. ನಿಯಮದಂತೆ, ಅರಸನು ಜನರೆಡೆಗೆ ಹೋಗುತ್ತಿರಲಿಲ್ಲ; ಜನರನ್ನು ಅವನೆಡೆಗೆ ತರಲಾಗುತ್ತಿತ್ತು. ಯೋವಾಷನು ಎಲೀಷನನ್ನು ನೋಡಲು ಹೋದನು ಎಂಬ ನಿಜಾಂಶವು ಪ್ರವಾದಿಗೆ ಅರಸನು ಕೊಡುವ ಗೌರವವನ್ನು ಸೂಚಿಸುವುದಾಗಿದೆ.

ಯೋವಾಷನು ಎಲೀಷನ ಹಾಸಿಗೆಯ ಬಳಿಯಲ್ಲಿ ನಿಂತುಕೊಂಡು ಬಹುವಾಗಿ ಅತ್ತನು[4] ಮತ್ತು "ನನ್ನ ತಂದೆಯೇ, ನನ್ನ ತಂದೆಯೇ, ಇಸ್ರಾಯಲ್ಯರಿಗೆ ರಥರಥಾಶ್ವ ಬಲಗಳಾಗಿದ್ದವನೇ" (ವಚನ 14ಸಿ) ಎಂದು ಹೇಳಿದನು! ಆತನ ಮಾತುಗಳು ಈ ಭೂಮಿಯನ್ನು ಬಿಟ್ಟು ಹೋಗುವ ಮುನ್ನ ಎಲೀಷನಿಂದ ಎಲೀಯನಿಗೆ ಮಾತನಾಡಲ್ಪಟ್ಟ ಮಾತುಗಳ ಪ್ರತಿಧ್ವನಿಯಾಗಿದೆ (2:12). ಎಲೀಷನು ಕೂಡಾ ಎಲೀಯನಂತೆಯೇ ರಾಷ್ಟ್ರದ ಮೇಲೆ ಬಲವನ್ನು ಹೊಂದಿದ್ದನು ಈ ಮಾತುಗಳು ಗುರುತಿಸುವವುಗಳು ಆಗಿವೆ. ಹೇಗೂ, ಎಲೀಯನಂತೆಯೇ ಎಲೀಷನು ಯಾವ ಉತ್ತರಾಧಿಕಾರಿಯನ್ನು ಹೊಂದಿರಲ್ಲಿ. ಅರಸನ ಈ ಹೇಳಿಕೆಯು, "ಈಗ ನಾವೇನು ಮಾಡಬೇಕು?" ಎಂಬ ಪ್ರಶ್ನೆಯನ್ನು ಸೂಚಿಸುವುದಾಗಿದೆ.

ತನ್ನ ಮರಣವು ಇನ್ನು ಮುಂದೆ ದೇವರು ತನ್ನ ಜನರನ್ನು ಹೊಂದಿಲ್ಲ ಎಂಬರ್ಥವಲ್ಲ ಎಂದು ಎಲೀಷನಿಗೆ ತನ್ನ ದೌರ್ಬಲ್ಯವಾದ ಬಲವನ್ನು ಬಳಸುತ್ತಾ ಅರಸನಿಗೆ ಆಶ್ವಾಸನೆಯನ್ನು ಕೊಟ್ಟನು. ಎಲೀಷನು ಅದನ್ನು ಸೂಚ್ಯಾರ್ಥವಾಗಿ ಮಾಡಿದನು (ಪ್ರವಾದಿಯು ಯಾವಾಗಲೂ ಮಾಡಿದಂತೆ: ನೋಡಿರಿ ಅಪೊಸ್ತಲರ ಕೃತ್ಯಗಳು 21:10, 11). ಆತನು ಅರಸನಿಗೆ "ಬಿಲ್ಲನ್ನೂ ಬಾಣಗಳನ್ನು ತರಿಸು" (2 ಅರಸು 13:15ಎ) ಎಂದು ಹೇಳಿದನು. ಬಿಲ್ಲುಗಾರರು ಅರಸನಿಗೆ ಅದನ್ನು ತಂದುಕೊಟ್ಟರು. ಅದರಲ್ಲಿ ಒಂದನ್ನು ಯೋವಾಷನು "ಬಿಲ್ಲನ್ನು ಮತ್ತು ಬಾಣವನ್ನು ತೆಗೆದುಕೊಂಡನು" (ವಚನ 15ಬಿ).

ಎಲೀಷನು ಯೋವಾಷನಿಗೆ "ಬಿಲ್ಲನ್ನು ಹಿಡಿದುಕೋ" (ವಚನ 16ಎ) ಎಂದು ಆಜ್ಞಾಪಿಸಿದನು. ಇನ್ನೊಂದು ಮಾತಿನಲ್ಲಿ "ಬಿಲ್ಲನ್ನು ಎಸೆಯುವಂತೆ ಹಿಡಿದುಕೋ" ಎಂದಿದೆ. ಅರಸನು ಬಿಲ್ಲನ್ನು ಹಿಡಿದುಕೊಂಡಾಗ "ಎಲೀಷನು ತನ್ನ ಕೈಗಳನ್ನು ಅವನ ಕೈಗಳ ಮೇಲೆ ಇಟ್ಟನು" (ವಚನ 16ಬಿ). ಅದನ್ನು ಮಾಡಲು ಪ್ರವಾದಿಯು ಆತನ ಕಾಲುಗಳಿಗೆ ತೊಂದರೆ ಕೊಟ್ಟನೇ, ಅಥವಾ ಅರಸನು ಹಾಸಿಗೆಯ ಬಳಿಯಲ್ಲಿ ಮೊಣಕಾಲೂರಿದ್ದನು ಹೀಗಾಗಿ ಎಲೀಷನು ತನ್ನ ವೃದ್ಧವಾದ ಕೈಗಳನ್ನು ಯೌವನಸ್ಥನ ಕೈಗಳಲ್ಲಿ ಇಟ್ಟನೇ? ಎಂಬುದನ್ನು ನಾನರಿಯೆನು, ಆದರೆ ಈ ಸೂಚನೆಯು ಒತ್ತಿ ಹೇಳುವುದೇನೆಂದರೆ ಯೋವಾಷ ಯೆಹೋವನ ಸಹಾಯವಿಲ್ಲದೇ ವೈರಿಗಳನ್ನು ಸೋಲಿಸಲಾರನು ಎಂದು. "ಪರಾಕ್ರಮದಿಂದಲ್ಲ, ಬಲದಿಂದಲ್ಲ, ನನ್ನ ಆತ್ಮದಂದಲೇ ಎಂಬುದು ಸೇನಾಧೀಶ್ವರ ಯೆಹೋವನ ನುಡಿ" ಎಂದು ಹೇಳಿದ್ದಾನೆ (ಜೆಕರ್ಯ 4:6) ಯೆಹೂದಿ ನಾಯಕನಿಗೆ ಹೇಳಲ್ಪಟ್ಟಿತು.

ಎಲೀಷನು ಅಲ್ಲಿದ್ದ ಒಬ್ಬರಿಗೆ "ಮೂಡಣ ದಿಕ್ಕಿನಲ್ಲಿರುವ ಕಿಟಕಿಯನ್ನು ತೆರೆ" ಎಂದು ಆಜ್ಞಾಪಿಸಿದನು (2 ಅರಸು 13:17ಎ). "ಮೂಡಣ ದಿಕ್ಕಿನಲ್ಲಿರುವ" ಎಂಬುದು ಹಜಾಯೇಲನು ಇಸ್ರಾಯೇಲ್ಯರಿಂದ ತೆಗೆದುಕೊಂಡಂತಹ, ಯೊರ್ದನಿನ ಪೂರ್ವದ ಕಡೆಯಲ್ಲಿನ ದಿಶೆಯಾಗಿರಬಹುದು (ನೋಡಿರಿ 10:32, 33). ಕದಗಳು ತೆರೆಯಲ್ಪಟ್ಟಾಗ ಎಲೀಷನು ಅರಸನಿಗೆ "ಬಾಣವನ್ನೆಸೆ" ಎಂದು ಆಜ್ಞಾಪಿಸಿದನು! "ಮತ್ತು ಆತನು ಎಸೆದನು" (13:17ಬಿ).

ಆಗ ಪ್ರವಾದಿಯು, "ಇದು ಜಯಪ್ರವಾದವಾದ ಯೆಹೋವನ ಬಾಣ; ಅರಾಮ್ಯರನ್ನು ಜಯಿಸುವ ಬಾಣ, ನೀನು ಅರಾಮ್ಯರನ್ನು ಅಫೇಕದಲ್ಲಿ ಸೋಲಿಸಿ ಸಂಹರಿಸಿಬಿಡುವಿ" (ವಚನ

17ಸಿ) ಎಂದು ಹೇಳಿದನು. ಅರಸನಿಗೆ ಕೊಡಲಾದ ಸಂದೇಶವು ಎರಡು ರೀತಿಯದ್ದಾಗಿತ್ತು: ಮೊದಲು, ಆತನು ವೈರಿಗಳನ್ನು ಎದುರಿಸಲು ಹೊಡೆಯುವ ಬಿಲ್ಲಿನಂತೆ ಧೈರ್ಯಸ್ಥನಾಗಿರ ಬೇಕಿತ್ತು (ಯೆಹೋಶುವ 8:18ರ ಜೊತೆ ಹೋಲಿಸಿರಿ). ಎರಡನೆಯದಾಗಿ ಆತನು ಹಾಗೆ ಮಾಡಿದ್ದಾದರೆ, ಯೆಹೋವನು ಆತನಿಗೆ ಜಯವನ್ನು ತಂದುಕೊಡುತ್ತಿದ್ದನು. ಅಫೇಕದ ಮೇಲಿನ ಜಯವನ್ನು ಇದು ಸೂಚಿಸುವುದಾಗಿದೆ (*ಎಲೀಷನ ದಿನಗಳಲ್ಲಿ ಇಸ್ರಾಯೇಲು ಮತ್ತು ಸುತ್ತಲಿನ ರಾಜ್ಯಗಳು* ಎಂಬ ನಕಾಷೆಯನ್ನು ನೋಡಿರಿ). ಅರವತ್ತು ಅದಕ್ಕಿಂತ ಹೆಚ್ಚಿನ ವರ್ಷಗಳ ಮೊದಲು, ಅಹಾಬನು ಅರಾಮ್ಯದ ಅಫೇಕದ ಮೇಲೆ ನಿರ್ಣಾಯಕ ವಿಜಯವನ್ನು ಸಂಪಾದಿಸಿದ್ದನು (1 ಅರಸು 20:26-30).

ದೇವರು ವಿಜಯವನ್ನು ವಾಗ್ದಾನಮಾಡಿದ್ದನು - ಆದರೆ ದೇವರ ವಾಗ್ದಾನಗಳು ಯಾವಾಗಲೂ ಶರತ್ತುಗಳನ್ನು ಒಳಗೊಂಡಿರುವವುಗಳಾಗಿರಬಹುದು ಅಥವಾ ಸೂಚಿತವಾಗಿರಬಹುದು. ಎಲೀಷನು ಅರಸನಿಗೆ "ಬಾಣಗಳನ್ನು ತೆಗೆದುಕೋ" (2 ಅರಸು 13:18ಎ) ಎಂದು ಹೇಳಿದನು. ಬಹುಶಃ ಇವು ಬತ್ತಳಿಕೆಯಲ್ಲಿ ಉಳಿದ ಬಾಣಗಳಿರಬಹುದು, ನಂತರ ಪ್ರವಾದಿಯು ಅರಸನಿಗೆ "ನೆಲವನ್ನು ಹೊಡಿ" ಎಂದನು (ವಚನ 18ಬಿ).[5]

ಈ ಸೂಚನೆಯಿಂದ ಅರಸನು ಚಕಿತನಾದನೇ? ಆತನು ಬಾಣವನ್ನು ತೆಗೆದುಕೊಂಡನು ಮತ್ತು "ಮೂರು ಸಾರಿ ನೆಲಕ್ಕೆ ಹೊಡೆದು ಸುಮ್ಮನೆ ನಿಂತನು" (ವಚನ 18ಸಿ). ಆತನು ಮೂರು ಸಾರಿ ಹೊಡೆದು ನಿಂತಾಗ, "ದೇವರ ಮನುಷ್ಯನು ಅವನ ಮೇಲೆ ಕೋಪಗೊಂಡನು, ನೀನು ಐದಾರು ಸಾರಿ ಹೊಡೆಯಬೇಕಾಗಿತ್ತು, ಹಾಗೆ ಮಾಡಿದ್ದರೆ ಅರಾಮ್ಯರು ನಿರ್ನಾಮವಾಗಿ ಹೋಗುವವರೆಗೂ ಅವರ ಮೇಲೆ ನಿನಗೆ ಜಯದೊರಕುತ್ತಿತ್ತು. ಈಗ ನೀನು ಮೂರು ಸಾರಿ ಮಾತ್ರ ಅರಾಮ್ಯವನ್ನು ಆಕ್ರಮಣಮಾಡಬೇಕು" ಎಂದು ಹೇಳಿದನು (ವಚನ 19).[6]

ನಾವು ಯೋಚಿಸುವುದೇನೆಂದರೆ, "ಅದು ಸರಿ ಅನ್ನಿಸದು. ಎಲೀಷನು ಎಷ್ಟು ಸಾರಿ ನೆಲಕ್ಕೆ ಹೊಡೆಯಬೇಕೆಂದು ಹೇಳಿರಲಿಲ್ಲ. ಆತನು ಕೇವಲ ನೆಲಕ್ಕೆ ಹೊಡಿ ಎಂದು ಹೇಳಿದನು ಮತ್ತು ಅರಸನು ಆತನು ಹೇಳಿದಂತೆ ಮಾಡಿದನು. ಅರಸನ ಮೇಲೆ ಸಿಟ್ಟಿಗೇಳುವುದಕ್ಕೆ ಮತ್ತು ಆತನನ್ನು ಶಿಕ್ಷಿಸುವುದಕ್ಕೆ ಅವನಿಗೆ ಯಾವ ಹಕ್ಕು ಇಲ್ಲ!" ನಿಜವಾಗಿ, ಪ್ರವಾದಿಯ ಸಾಕು ನಿಲ್ಲಿಸು ಎಂದು ಹೇಳುವ ತನಕ ನೆಲಕ್ಕೆ ಹೊಡೆಯುವುದನ್ನು ಅರಸನು ಮುಂದುವರೆಸುವದು ಅಲ್ಲಿ ಅಪೇಕ್ಷಿತವಾದದ್ದಾಗಿತ್ತು. "ಎಲ್ಲಾ ಬಾಣಗಳು ಮಾಮೂಲಾದವುಗಳು" ಇದರಿಂದ ಏನೂ ಮಾಡಲಾಗದು ಈ ಎರಡರಲ್ಲಿ ಯಾವುದು ಇಲ್ಲದಿದ್ದರೂ ಅರಾಮ್ಯದ ಜಯವನ್ನು ಸಂಪಾದಿಸಬಹುದೆಂದು ಅರಸನು ಯೋಚಿ ಸಿದ್ದನೇ? ಆತನು ಆ "ಆವೃದ್ಧ ಮನುಷ್ಯನ ಆಟ ಆಡುವುದರಿಂದ ದಣಿವಿಗೆ ಒಳಗಾದನೇ?" ತನ್ನ ಜನರ ಮುಂದೆ "ಅಂತಹ ಮೂರ್ಖತದ ಸಂಗತಿಗಳನ್ನು" ಮಾಡುವುದರಿಂದ ನಾಚಿಕೆಗೊಳಗಾದನೇ? ಯೋವಾಷನ ಹೃದಯವನ್ನು ನಾವು ತಿಳಿಯಲಾರೆವು, ಆದರೆ ದೇವರು ಹಾಗೆ ಮಾಡಬಲ್ಲನು. ಅರಸನ ವಿಜಯಗಳು ಎಷ್ಟು ಮಿತಿಯುಳ್ಳವುಗಳಾಗಿದ್ದವು? ಆತನ ಸ್ವಂತದ ನಂಬಿಕೆ, ಉತ್ಸಾಹ, ಮತ್ತು ಪ್ರಯತ್ನಗಳು ಮಿತಿಯುಳ್ಳವುಗಳು.

"ಕಡಿಮೆಯಾದದದನ್ನು ಮಾಡುವುದರ" ಅಪಾಯವನ್ನೂ ಒಳಗೊಂಡಂಥ ಈ ಘಟನೆಗಳಿಂದ ಕೆಲವು ಪಾಠಗಳನ್ನು ತೆಗೆದುಕೊಳ್ಳಲಾಗಿದೆ. ಹೇಗೋ, ನಾನು ಒತ್ತಿ ಹೇಳುವುದೇನೆಂದರೆ ಮರಣಶಯ್ಯೆಯಲ್ಲಿದ್ದಾಗಲೂ ಕೂಡಾ, ಎಲೀಷನು ಇನ್ನೂ ಪ್ರವಾದನೆಗಳ ದೇವರ ಮನುಷ್ಯನಾಗಿದ್ದಾನೆ. ಆತನು ಯೋವಾಷನಿಗೆ ಅರಾಮ್ಯದ ಮೇಲೆ ಮೂರು ವಿಜಯವನ್ನು ಸಾಧಿಸುವನು ಎಂದು ಹೇಳಿದನು (ವಚನ 19), ಮತ್ತು ಅದೇ ಈ ಪ್ರಕರಣವಾಗಿತ್ತು. ಆರು ವಚನಗಳ ನಂತರ ನಾವು ಹೀಗೆ ಓದುವವರಾಗಿದ್ದೇವೆ, "ಅವನನ್ನು [ಅರಾಮ್ಯರ ಅರಸನನ್ನು] ಮೂರು ಸಾರಿ ಸೋಲಿಸಿ ಇಸ್ರಾಯೇಲ್ಯರ ಎಲ್ಲಾ ಪಟ್ಟಣಗಳನ್ನು ಹಿಂದಕ್ಕೆ ತೆಗೆದುಕೊಂಡನು" (ವಚನ 25ಬಿ).

## ಸತ್ತರೂ, ಕೂಡಾ ದೇವರ ಶಕ್ತಿಯುತ ಮನುಷ್ಯ (13:20, 21)

ಯೋವಾಷನ ಭೇಟಿಯ ಸ್ವಲ್ಪ ಹೊತ್ತಿನ ನಂತರ "ಎಲೀಷನು ಮೃತಿ ಹೊಂದಿದನು" (ವಚನ 20ಎ). ಎಲೀಯನು ಸುಳಿಗಾಳಿಯಲ್ಲಿ ಭೂಮಿಯನ್ನು ಬಿಟ್ಟು ಹೋದನು ಆದರೆ ಎಲೀಷನಾದರೋ ಅಲ್ಲಿ ಪರಲೋಕ ಸಾಮ್ರಾಜ್ಯದ ಯಾವ ನಾಟಕೀಯ ಪರಿವರ್ತನೆಯು ಇರಲಿಲ್ಲ, ಬದಲಾಗಿ ಆತನು ಒಬ್ಬ ಸಾಮಾನ್ಯವಾದ ಮನುಷ್ಯನಂತೆ ಹಂಚಿಕೊಂಡನು (ಇಬ್ರಿಯ 9:27ಎ). ಆತನ ಮರಣಾನಂತರ, "ಅವರು ಅವನನ್ನು ಸಮಾಧಿ ಮಾಡಿದರು" (2 ಅರಸು 13:20ಬಿ). ಸುಸಂಬದ್ಧವಾದ ಸಮಾಧಿ ಮಾಡುವಿಕೆ ಅಂದರೆ ದೇಹವನ್ನು ಶುಚಿ ಮಾಡುವದು ಮತ್ತು ಸ್ವಚ್ಛವಾದ ಬಟ್ಟೆಯನ್ನು ಸುತ್ತುವದು ಮತ್ತು ಸುಗಂದದ್ರವ್ಯಗಳನ್ನು ಇಡುವದು ಆಗಿದೆ. CJB ಯು ಹೇಳುವುದೇನೆಂದರೆ "ಅವರು ಆತನ ದೇಹವನ್ನು ಸಮಾಧಿಯ ಗುಹೆಯಲ್ಲಿ ಇಟ್ಟರು" ಎಂದು. "ಜೋಸ್ಪಸ್‌ನ ಪ್ರಕಾರ ... ಆತನ ಅಂತ್ಯಕ್ರಿಯೆಯು ಅದ್ಭುತವಾಗಿತ್ತು."[7]

ಎಲೀಷನ ಮರಣದ ಸಮಯದಲ್ಲಿ, ಸುಲಿಗೆಗಾರರು ಪದೆ ಪದೇ ಇಸ್ರಾಯೇಲ್ಯರಿಗೆ ತಲೆನೋವಾಗಿದ್ದರು. "ಮೋವಾಬ್ಯರು ಪ್ರತಿವರುಷದ ಪ್ರಾರಂಭದಲ್ಲಿ ಸುಲಿಗೆ ಮಾಡುವುದ ಕ್ಕೋಸ್ಕರ ಗುಂಪುಗುಂಪಾಗಿ ಬರುತ್ತಿದ್ದರು" (ವಚನ 20ಸಿ). ಇಸ್ರಾಯೇಲ್ಯರು ಈ ಸುಲಿಗೆಗಾರರಾದ ಅರಾಮ್ಯರ ಗುಂಪಿನ ಪಿಡುಗಿನೊಳಗಿದ್ದರು (5:2); ಈಗ ಮೋವಾಬ್ಯ ರಿಂದಲೂ ಸಹ ಆಕ್ರಮಣಕ್ಕೆ ಒಳಗಾಗುತ್ತಿದ್ದಾರೆ.[8]

ಒಂದು ದಿವಸ ಜನರು ಒಬ್ಬ ಸತ್ತವನನ್ನು ಸಮಾಧಿಮಾಡಲು ಹೋದಾಗ ಮೋವಾಬ್ಯರ ಗುಂಪು ಬರುತ್ತಿದ್ದುದನ್ನು ಕಂಡರು (13:21ಎ). ತಮ್ಮ ಜೀವಕ್ಕಂಜಿ, ಅವರು ಓಡಲು ಸಿದ್ಧ ವಾದರು. ಅವರಿಗೆ ಶವದ ಸಮಾಧಿಯನ್ನು ಸಂಪೂರ್ಣ ಮಾಡಲು ಸಮಯವು ಸಿಕ್ಕಲಿಲ್ಲ, ಶವವನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಲೂ ಆಗಲಿಲ್ಲ ಯಾಕೆಂದರೆ ಅದು ಅವರನ್ನು ನಿಧಾನಿಸುತ್ತಿತ್ತು. ಅದೇ ಸಮಯದಲ್ಲಿ ಆ ಶವವನ್ನು ಅಪವಿತ್ರಗೊಳಿಸಲು ಮೋವಾಬ್ಯರ ಮುಂದೆ ಇಟ್ಟುಹೋಗಲು ಅವರು ಬಯಸಲಿಲ್ಲ. ಅವರು ಬೇಗನೇ ಅಲ್ಲಿಯೇ ಹತ್ತಿರುವವಿರುವ ಗುಹೆಯ ಕಲ್ಲನ್ನು ಸರಿಸಿದರು, ಯಾವುದೇ ಸಂಸ್ಕಾರಗಳಿಲ್ಲದೇ ಆ ದೇಹವನ್ನು ಒಳಗಡೆ ಇಟ್ಟರು (13:21ಎ), ತಿರುಗಿ ಕಲ್ಲನ್ನು ಮುಚ್ಚಿದರು ಮತ್ತು ಜೀವ ಉಳಿಸಿಸ್ಕೊಳ್ಳಲು ಓಡಿದರು.[9]

ಇದು ಸಂಭವಿಸಿದಂತೆ, ಈ ಗೋರಿಯ ಗುಹೆಯು ಎಲೀಷನದಾಗಿತ್ತು. ಆ ಮನುಷ್ಯನ ದೇಹದ ಅಂಚು "ಎಲೀಷನ ಎಲುಬುಗಳಿಗೆ ತಗುಲಿದ ಕೂಡಲೇ ಉಜ್ಜೀವಿಸಿ ಎದ್ದು ನಿಂತನು" (ವಚನ 21ಬಿ).[10] ಆತನ ಸ್ನೇಹಿತರ ತಿರುಗಿ ಬಂದಾಗ ಆತನ ದೇಹವು ಪುನಃ ಜೀವ ಹೊಂದಿದ್ದನ್ನು ಕಂಡು ಅಚ್ಚರಿಗೊಂಡಿರುವದನ್ನು ನೀನು ಊಹಿಸಬಲ್ಲೆಯಾ? ಹಳೆಯ ಒಡಂಬಡಿಕೆಯಲ್ಲಿ, ಕೇವಲ ಮೂವರು ಜನರು ಸತ್ತವರೊಳಗಿಂದ ಎದ್ದುದರ ಲೆಕ್ಕ ಇದೆ. ಇವುಗಳಲ್ಲಿ ಇಬ್ಬರು ಎಲೀಷನಿಂದ ಎಬ್ಬಿಸಲ್ಪಟ್ಟವರು, ಮತ್ತು ಒಬ್ಬನು ಪ್ರವಾ ದಿಯು ಸತ್ತಮೇಲೆ ಕಾಣಿಸಿಕೊಂಡನು! "ಯೆಹೂದಿಗಳು ಈ ಅದ್ಭುತವನ್ನು ಎಲೀಷನ ದೊಡ್ಡ ಕೀರ್ತಿ ಎಂದು ಎಣಿಸುವವರಾಗಿದ್ದಾರೆ."[11]

ತಿರುಗಿ, ಈ ಘಟನೆಗಳಿಂದ ಕೆಲವು ಅನ್ವಯಗಳನ್ನು ಮಾಡಬಹುದಾಗಿದೆ. ಇದು ಬಹುಶಃ ವೇದಭಾಗದಲ್ಲಿ ಒಳಗೊಂಡಿದ್ದು ಈ ಅಂಶವು ಪ್ರವಾದಿಯು ಮರಣಿಸಿದರೂ ಕೂಡ, ಆತನು ದೇವರನ್ನು ಸೇವಿಸಿದನು ಎಂಬ ಅಂಶವನ್ನು ಕೊಡುವುದಾಗಿದೆ. ಹೇಗೋ, ನಾನು ಇನ್ನೊಂದು ಸತ್ಯವನ್ನು ಒತ್ತಿ ಹೇಳುವವನಾಗಿದ್ದೇನೆ: ಒಬ್ಬನು ಮಾಡಬಹುದಾದ ಒಳ್ಳೆಯ ಸಂಗತಿ ಲೌಕಿಕ ಪಯಣಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ. ದೈವಿಕ ಮನುಷ್ಯನ ಪ್ರಭಾವವು ಆತನ ಜೀವಿತ ವನ್ನು ಮೀರಿದ್ದಾಗಿದೆ.

ನಿನ್ನ ಮರಣದ ನಂತರ, ನಿನ್ನ ಎಲಬುಗಳು ಶವದ ದೇಹಕ್ಕೆ ತಟ್ಟುವುದಿಲ್ಲ ಮತ್ತು ಅವುಗಳನ್ನು ಪುನರುಜ್ಜೀವಿಸುವುದು ಇಲ್ಲ; ಆದರೆ ನಿನ್ನ ಜೀವಿತವು ದೇವರಿಗೆ

ಸಮರ್ಪಿತವಾಗಿದ್ದಾಗ, ನಿನ್ನ ಮಾತುಗಳು ಇತರರ ಹೃದಯವನ್ನು ನಿರಂತರವಾಗಿ ತಟ್ಟುವವುಗಳಾಗಿವೆ. ನೀವು ಜೀವಿಸುವ ಜೀವಿತದ ಸ್ಮರಣೆಗಳು ಇತರರ ಜೀವಿತವನ್ನು ಮುಟ್ಟುವವು ಆಗಿವೆ. ನಿನ್ನ ದೈವಿಕ ಉದಾಹರಣೆಗಳು ನೀವು ಬಲ್ಲಂತವರ ಜೀವನ, ಆತ್ಮೀಕ ಜೀವನ, ಇವುಗಳನ್ನು ಕೊಡುವಂತದ್ದಾಗಿವೆ. ಇದು ಹೇಬೆಲನ ಬಗೆಗೆ ಹೇಳಿದಂತೆ, "ಅವನು ಸತ್ತಿದ್ದರೂ ಅವನ ನಂಬಿಕೆಯ ಮೂಲಕ ಇನ್ನೂ ಮಾತನಾಡುತ್ತಾನೆ" (ಇಬ್ರಿಯ 11:4ಎ) ಅದು ನಿನ್ನ ಬಗೆಗೂ ಹೇಳುವಂತಹದ್ದಾಗಬೇಕು.

## ಮುಕ್ತಾಯ

ಕಾಲ್ಫ್‌ವಾಲ್ಡೊ ಎಮರಸ್‌ನ್, ಹೇಳುವುದೇನೆಂದರೆ ನಾಗರೀಕತೆಯ ಪರೀಕ್ಷೆಯು "ಒಂದು ದೇಶ ಯಾವ ತರದ ಮನುಷ್ಯನನ್ನು ತಯಾರಿಸುತ್ತದೋ ಅದೇ ನಿಜವಾದ ಪರೀಕ್ಷೆ ಆಗಿದೆ" ಎನ್ನುತ್ತಾನೆ.[12] ಜಾರ್ಜ್ ಟ್ರೂಯೆಟ್ ಬರೆಯುವುದೇನೆಂದರೆ, ನಾಗ ರೀಕತೆಯ ಆಡಂಬರದ ವಾಣಿಜ್ಯವು ಏನೇ ಇದ್ದರೂ, ಪ್ರಾಪಂಚಿಕ ಸಾಮ್ರಾಜ್ಯದಲ್ಲಿ ಎಷ್ಟೇ ಅದ್ಭುತವಾದ ಸಾಧನೆಯನ್ನು ಸಾಧಿಸಿದ್ದರೂ, ಅಂಥ ನಾಗರೀಕತೆಗಳಲ್ಲಿ ಪ್ರಮುಖ ಸಂಗತಿಯಾದ ಚಾರಿತ್ರ್ಯವನ್ನು ಅದು ಉನ್ನತೀಕರಿಸದೇ ಹೋಗಿದ್ದರೆ ಅದು ಶೋಚ ನೀಯವಾದ, ಭೀಕರ ವಿಫಲತೆಯಾಗಿದೆ.[13] ಇಸ್ರಾಯೇಲ್ಯರ ಉತ್ತರ ರಾಜ್ಯಗಳಲ್ಲಿ ಚಾರಿತ್ರವು ಉನ್ನತಗೊಳಿಸುವಿಕೆಯನ್ನು ಹೊಂದಿರಲಿಲ್ಲ, ಆದರೆ ಅದಕ್ಕೆ ಬೆಲೆಕೊಡುವ ಒಬ್ಬನನ್ನು ದೇವರು ಹೊಂದಿದ್ದನು: ಆತನ ಮನುಷ್ಯನು ಸಮಯವನ್ನು ತೊಂದರೆ ಸಮಯಕ್ಕಾಗಿ ಮಾಡಿದನು. ನಾವು ಇನ್ನೂ ತೊಂದರೆಗೊಳಪಡಲ್ಪಟ್ಟ ಸಮಯದಲ್ಲಿ ಇದ್ದೇವೆ - ಮತ್ತು ನಮಗೆ ಇನ್ನೂ ಎಲೀಷನ ಚಾರಿತ್ರ್ಯವಿರುವ ಪುರುಷರ ಸ್ತ್ರೀಯರ, ಬಾಲಕರ ಬಾಲಕಿಯರ ಅವಶ್ಯಕತೆಯು ಇದೆ. ಈ ಮಾರ್ಗವನ್ನು ಇಟ್ಟಿದ್ದಾರೆ "ಅಸಮಾನ್ಯವಾದ ಚಾರಿತ್ರ್ಯವುಳ್ಳ ಸಾಮಾನ್ಯ ಜನರ ಬಹುವಾದ ಅವಶ್ಯಕತೆಯು ನಮಗಿದೆ."[14] ನೀವು ಎಲ್ಲೇ ವಾಸಿಸುತ್ತೀರಿ, ನೀವು ದೇವರು ಭರವಸವಿಡಬಹುದಾದ ಸ್ತ್ರೀ ಅಥವಾ ಪುರುಷರಾಗಿದ್ದೀರಿ ಎಂದು ಸಂಕಲ್ಪಸಿಕೊಳ್ಳಿರಿ!

---

ಟಿಪ್ಪಣೆಗಳು

[1]ತಿರುಗಿ, ನಾವು ಇಸ್ರಾಯೇಲ್ಯನಲ್ಲಿ ಮತ್ತು ಯೂದಾಯದಲ್ಲಿ ಒಂದೇ ಹೆಸರಿನ ಅರಸರನ್ನು ಅಂದರೆ ಯೋವಾಷ (ಯೆಹೋವಾಷ) ಎಂಬುದನ್ನು ನಾವು ಹೊಂದಿದ್ದೇವೆ. [2]ನೀವು ಕಂಡಂತಹ ಸುಂದರವಾದ ಸೂರ್ಯಾಸ್ತಮಾನವನ್ನು ನೀವು ವಿವರಿಸಬಹುದು. [3]ಎಲೀಷನ ಮರಣದ ಸಮಯದಲ್ಲಿ ಆತನ ಖಚಿತವಾದ ವಯಸ್ಸನ್ನು ನಿರ್ಣಯಿಸುವುದಕ್ಕಾಗಿ, ನಾವು ಎಲೀಯನ ಉತ್ತರಾಧಿಕಾರಿಯಾಗುವ ಮೊದಲು ಆತನು ಎಷ್ಟು ವಯಸ್ಸಿನವನಿದ್ದನು ಎಂಬುದನ್ನು ನಾವು ತಿಳಿಯಬೇಕು. [4]NASBಯ ನನ್ನ ಆವೃತ್ತಿಯ ಪಾರ್ಶ್ವ ಟಿಪ್ಪಣೆಗಳ ಪ್ರಕಾರ ಅಕ್ಷರ ಸಹ, "ಆತನ ಮುಂದೆ" ಆತನು ಅತ್ತನು ಎಂದಾಗಿದೆ. ಅರಸನ ಕಣ್ಣೀರು ಪ್ರವಾದಿಯ ಮುಖದ ಮೇಲೆ ಬಿದ್ದಿರಬೇಕು. [5]ಮೂಲಭಾಷೆಯಲ್ಲಿ ಇದರ ಅರ್ಥವು "ನೆಲವನ್ನು [ಬಾಣಗಳನ್ನು ಒಳಗೆ] ಹೊಡೆ" ಎಂದಿರಬಹುದು. [6]ಇದು ಯೆರೋಬ್ಬಾಳನನ್ನು II ಬಿಟ್ಟು ಅರಾಮ್ಯದ ಮೇಲೆ ಹಿಡಿತವನ್ನು ಸಂಪಾದಿಸಿದನು ಎಂದಿದೆ (ನೋಡಿರಿ 2 ಅರಸು 14:25, 28). [7]G. Rawlinson, "2 Kings," *The Pulpit Commentary*, vol. 5, *1 & 2 Kings*, ed. H. D. M. Spence and Joseph S. Exell (Grand Rapids, Mich.: Wm. B. Eerdmans Publishing Co., 1950), 265; Josephus *Antiquities* 9.8.6. [8]ಹಿಂದಿನ ಪಾಠದಲ್ಲಿ ಇಸ್ರಾಯೇಲ್ಯರ ವಿರುದ್ಧ ಬಂಡೆದಿದ್ದರು ಎಂದು ಹೇಳಲ್ಪಟ್ಟಿದೆ (ನೋಡಿರಿ 2 ಅರಸು 3:4, 5). [9]ಈ ಎರಡನೇಯ ಪ್ಯಾರದಲ್ಲಿ ಕೊಟ್ಟಿರುವ 2 ಅರಸು 13:21 ಮೊದಲನೇಯ ಭಾಗದಲ್ಲಿ ಸಂಕ್ಷಿಪ್ತ ವಿವರಣೆಯಲ್ಲಿ ಬಳಸಲಾಗಿದೆ. [10]ಬಹುಶ ಈ ಅದ್ಭುತವು ಮೊದಲನೆಯದು, ನನ್ನ ನಂಬಿಕೆಯ ಪ್ರಕಾರ ಇದು ಕೊನೆಯದು ಎಂದು ಹೇಳಬಹುದು, ಅಂದರೆ ಮರಣಹೊಂದಿದ ಒಬ್ಬ ವ್ಯಕ್ತಿಯನ್ನು ಎಲುಬುಗಳಿಂದ ಮಾಡಿದ ಅದ್ಭುತ. ಇದನ್ನು ಆಧಾರವಾಗಿಟ್ಟು ಪುರಾತನ ವಸ್ತುಗಳು ಯಾವುದೇ ಅದ್ಭುತವನ್ನು

ಮಾಡಬಹುದೆಂಬ ವಿಷಯವನ್ನು (ಕ್ಯಾಥೋಲಿಕ್ ಸಂಘ) ಪ್ರಚುರಿಸುತ್ತದೆ. (Adam Clarke, *The Holy Bible with a Commentary and Critical Notes*, vol. 2, *Joshua–Esther* [New York: Abingdon-Cokesbury Press, n.d.], 525.)

[11]Albert Barnes, "Kings," *The Bible Commentary* (Grand Rapids, Mich.: Baker Book House, 1953), 264; quoted in James Burton Coffman and Thelma B. Coffman, *Commentary on Second Kings*, James Burton Coffman Commentaries, The Historical Books, vol. 6 (Abilene, Tex.: A.C.U. Press, 1992), 171. [12]Quoted in George W. Truett, *The Prophet's Mantle* (Grand Rapids, Mich.: Wm. B. Eerdmans Publishing Co., 1948), 19. [13]Ibid. [14]Dale Hartman, sermon preached at the Eastside church of Christ, Midwest City, Oklahoma, 21 December 2003.